ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ, ತರೀಕೆರೆ

ಸಿ.ಸಿ.ಸಂಖ್ಯೆ.618/2023
ಉಪಸ್ಥಿತರುಃ

ಶ್ರೀ ಶಿವಕುಮಾರ್.ಆರ್., ಬಿ.ಎ.ಎಲ್. ಎಲ್ಎಲ್.ಬಿ.

ಪಿರ್ಯಾದುದಾರರುಃ ಅಜ್ಜಂಪುರ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದಃ ಶ್ರೀ ರಘುನಾಯ್ಕ,
ಬಿನ್ ಶ್ರೀ ಹೇಮ್ಲಾನಾಯ್ಕ,
ವಯಸು 28 ವರ್ಷಗಳು,
ವಾಸಃ ಹೊಸಳ್ಳಿ ತಾಂಡ್ಯ ಗ್ರಾಮ,
ಅಮೃತಾಪುರ ಹೋಬಳಿ,
ತರೀಕೆರೆ ತಾಲ್ಲೂಕು.

## :ದೋಷಾರೋಪಣೆ:

ಶ್ರೀ ಶಿವಕುಮಾರ್.ಆರ್., ಬಿ.ಎ.ಎಲ್., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 0812.2021 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಹೊಸಳ್ಳಿ ತಾಂಡ್ಯ ಗ್ರಾಮದ ಹತ್ತಿರದ ದೇವಾಲಯದ ರಸ್ತೆಯಲ್ಲಿ ಆರೋಪಿಯಾದ ನೀವು ಸುಮಾರು 1334.94/- ಬೆಲೆಯ 90 ಎಂ.ಎಲ್.ನ ಆಫೀಸರ್ ಚಾಯ್ಸ್ ವಿಸ್ಕಿಯ 38 ಟೆಟ್ರಾ ಪ್ಯಾಕೆಟನ್ನು ಯಾವುದೇ ಪರವಾನಗಿ ಇಲ್ಲದೇ ಮಾರಾಟಕ್ಕೆ ಇಟ್ಟುಕೊಂಡಿದ್ದು, ಆದಕಾರಣ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಆರೋಪಿಯಾದ ನೀವು 1334.94/- ಬೆಲೆಯ 90 ಎಂ.ಎಲ್.ನ ಆಫೀಸರ್ ಚಾಯ್ಸ್ ವಿಸ್ಕಿಯ 38 ಟೆಟ್ರಾ ಪ್ಯಾಕೆಟನ್ನು ಯಾವುದೇ ಪರವಾನಗಿ ಇಲ್ಲದೇ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡಲು ಇಟ್ಟುಕೊಂಡಿದ್ದು, ಆದಕಾರಣ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : **20.10.2023** ಸಹಿ/-

(ಶಿವಕುಮಾರ್.ಆರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕೆರೆ.